‘ಮಾವಾ..’ ನನ್ನನ್ನು ಮಾತನಾಡಿಸಿದ ತಾಯಿಯ ಸಂಜ್ಞೆ ಮೇರೆಗೆ ಹುಬ್ಬು ಹಾರಿಸಿ ಸುಮ್ಮನಾದೆ. ಕೊಟ್ಟೆ ಇಡ್ಲಿಯನ್ನು ಕೆಂಪು ಚಟ್ನಿಗೆ ಹಚ್ಚಿಕೊಂಡು ಹೊಟ್ಟೆ ತುಂಬುವಷ್ಟು ತಿಂದೆ. ಲಾಡು ಹಾಕಿಸಿಕೊಳ್ಳಲಿಲ್ಲ. ನಾನು ಗೋಪಿ ಎಲ್ಲರಿಗಿಂತ ಮೊದಲೇ ಕೈ ತೊಳೆದು ಹೊರಬಂದೆವು. ಬಂದು ನನ್ನ ಮಡಿಲೇರಿ ಕುಳಿತು ಕಿಸೆಯಲ್ಲಿ ಮೊಬೈಲ್ ಇದೆಯೇ ಎಂದು ಹುಡುಕಿದ. ಆದರೆ ಇರಲಿಲ್ಲ. ಬೆಕ್ಕು ಪ್ರಧಾನ ಬಾಗಿಲ ಬಳಿ ಹೋಯಿತು ಮತ್ತೆ ಅದರ ಹಿಂದೆ ಓಡಿದ. ಹಿಡಿದು ಮತ್ತೆ ಹೊಟ್ಟೆಗೆ ಅಮುಕಿಕೊಂಡ ಬೆಕ್ಕು ಚೋಟಿನಲ್ಲಿ ಹೊಡೆಯಿತು ಅಳುತ್ತ ಒಳಹೋದ. ‘ಶ್ರಾದ್ಧದ ಹೊತ್ತಿಗೆ ಮಾತ್ರ ಕಾವಲು ನೀನು ಈಗ ಬೆಕ್ಕು ಒಳಗೆ ಬಂದ್ರೆ ಅಡ್ಡಿಲ್ಲೆ.’ ಅಂದಳು ಲಲಿತಮ್ಮ ಗೋಪಿಯ ಹಣೆಗೆ ಎಣ್ಣೆ ಹಚ್ಚುತ್ತ. ‘ಹುಡುಗರು ಮಕ್ಕಳು ಗೊತ್ತಾಗದೇನೆ ನಿನಗೆ ರಂಡೆ’ ಬೆಕ್ಕಿಗೆ ಒಂದು ಬಾರಿಸಿದಳು. ತನಗೇನು ಗೊತ್ತೇ ಇಲ್ಲ ಎಂಬಂತೆ ಬೆಕ್ಕು ನಡೆದು ಹೋಯಿತು. ಊಟದ ಒಳದ ಬಾಗಿಲಲ್ಲಿ ನಿಂತು ಗೋಪಿಯನ್ನು ಕರೆದೆ. ‘ಬೇಡ ಹೋಗುವದು’ ಎಂಬಂತೆ ದೊಡ್ಡಪ್ಪ ಗೋಪಿಗೆ ಸನ್ನೆ ಮಾಡಿದ. ತಿರುಗಿ ಬಂದು ಕುಳಿತೆ. ಎಲ್ಲರೂ ಊಟ ಮುಗಿಸಿ ಬಂದು ಇಸ್ಪೀಟು ಮಂಡಲ ಶುರು ಮಾಡಿದರು. ನನಗೆ ಆಟ ಗೊತ್ತಿರಲಿಲ್ಲ ದೂರವೇ ಕುಳಿತೆ. ಹಿರಿಯರೆಲ್ಲ ಒಬ್ಬರಿಗೊಬ್ಬರು ಮುಖಮಾಡಿ ಸುತ್ತಾಗಟ್ಟೆ ಕುಳಿತರು. ಅವರ ಇಸ್ಪೀಟು ಎಲೆಗಳು ಜಪಾನಿ ಸುಂದರಿಯರ ಬೀಸಣಿಕೆಯಂತೆ ಕುಣಿಯುತ್ತಿತ್ತು. ಎಲೆ ಒಗೆದರು ಹೆಕ್ಕಿದರು ಕುಕ್ಕಿದರು ತುರ್ಪು ಎಂದರು ಡ್ರಾಪು ಎಂದರು ಶೋ ಎಂದರು ಬಗೆಹರಿಯಲಿಲ್ಲ. ಗೋಪಿ ಮೆಲ್ಲಗೆ ಬಂದ.ಕತೆ ಹೇಳುವಂತೆ ಪೀಡಿಸತೊಡಗಿದ. ‘ಅಲ್ಲಿ ಕೇಳು ಇಸ್ಪೀಟು ಆಡ್ತಾ ಮಾತಾಡದನ್ನ ಅಜ್ಜಂದಿರೆಲ್ಲ ಒಳ್ಳೆ ಕಥೆ ಹೇಳ್ತ ನೋಡು’ ಸಾಗ ಹಾಕಲು ನೋಡಿದೆ, ಅವ ಪಟ್ಟು ಬಿಡಲಿಲ್ಲ. ‘ಯಕ್ಷಗಾನ ಎಂದರೆ ಬರಿ ಕುಣಿತ ಎಂಬುವ ಹಂಗಾಯ್ತು ಮೊದಲಿನಂಗೆ ಕೃಷಿ ಮಾಡುವರಿಲ್ಲ, ಈಗ ಎಲ್ಲ ಬಿದ್ದ ಅಡಿಕೆ ಹೆಕ್ಕುವರೆಯ’ ಮಾತಿಗೆ ಶುರುವಿಟ್ಟರು ಭಟ್ಟರು. ‘ಕಾಲದ ಸಂತಿಗೆ ಬದಲಾಗುವುದೆಯ’ ಜೋಯಿಸರು. ‘ಬದಲಾಗುವ, ಆದರೆ ಎಂತಹ ಬದಲಾವಣೆ ಉಟ್ಟ ವೇಷದಲ್ಲಿ ಐದು ಗಂಟೆಗೆ ಒಂದು ಬದಿಗೆ ಓಮಿನಿ ಮೇಲೆ ಹೋಗಿ ಹತ್ತು ಗಂಟೆಗೆ ಒಂದು ಬದಿಗೆ.ರಾತ್ರಿಮೇಲೆ ಎರಡು ಗಂಟೆಗೆ ಒಂದು ಬದಿಗೆ ಕುಣಿಯುವುದು ಬದಲಾವಣೆಯ ಇಲ್ಲ ಡೊಂಬರಾಟವ’ ಭಟ್ಟರು ಸಿಟ್ಟಾದರು. ‘ಅದೂ ಹೌದು ಹೇಳಿ’ ದೊಡ್ಡಪ್ಪ ಅಂದ ‘ಇದೇ ಆಗಿದ್ದು, ನೋಡುವವ ಸರಿ ಇದ್ದರೆ ಹಿಂಗಾಗುತಿತ್ತ?, ಪಗಡೆ ನೆಲಕ್ಕೆ ತಾಗಿಸಿದರೆ ಚಪ್ಪಾಳೆ, ಮಂಡಿ ಕುಣಿದರೆ ಶಿಳ್ಳು ಇಷ್ಟೇ ಅಲ್ಲವ ಯಕ್ಷಗಾನ’ ಭಟ್ಟರು ಜೋರಾದರು ನನಗೆ ಮತ್ತೆ ನೆನಪಿನ ಸುಳಿ ಸುತ್ತಿಕೊಂಡಿತು, ಮಸಿ ಕೆಂಡದಲ್ಲಿ ಮೀಸೆ ಬಳಿದುಕೊಳ್ಳುತ್ತಲಿದ್ದೆ ಮನಸಿನಲ್ಲಿ. ‘ಎಲ್ಲ ಕಮರ್ಷಿಯಲ್ಲು’ ಯಾರು ಹೇಳಿದರು ಗೊತ್ತಾಗಲಿಲ್ಲ ಗುಂಪಿನೊಳಗೊಂದು ದನಿ ‘ಯಕ್ಷಗಾನ ನೋಡುವವನಿಗೂ ಒಂದು ಸಂಸ್ಕಾರ ಬೇಕು, ನಾನು ಸಣ್ಣವನಿದ್ದಾಗ ಒಬ್ಬ ಚಂಡೆ ಸದ್ದಿಗೆ ಸಮವಾಗಿ ಹೆಜ್ಜೆಹಾಕುತ್ತ ಪ್ರವೇಶ ಮಾಡಿದ. ಸಮಸ್ಯೆ ಎಂದರೆ ಬಲಗೈಯಲ್ಲಿ ಬಿಲ್ಲು ಹಿಡಿದಿದ್ದ ಆಗ ಒಬ್ಬ ಮುದುಕರು ಸೀದಾ ರಂಗವೇರಿ’, ತಮ್ಮಾ..ಬಿಲ್ಲು ಹಿಡಿಯದು ಬಲಗೈಯಲ್ಲಿ ಅಲ್ಲ... ಎಡಗೈಯಲ್ಲಿ ಎಂದು ಬಿಲ್ಲು ಕಸಿದು ಎಡಗೈಯಲ್ಲಿ ಹಿಡಿಸಿ ಹೋದರು. ಇಂತಹ ನೋಡುಗ ಬೇಕು ಸರ್ಕಸ್ಸಿಗೆ ಶಿಳ್ಳು ಹಾಕುವವ ಅಲ್ಲ’ ಖೇದ ವ್ಯಕ್ತಪಡಿಸಿದರು.

ಕಥೆ ಪ್ರಾರಂಭಿಸಿದೆ ‘ಒಂದಲ್ಲ ಒಂದೂರಲ್ಲಿ ಒಬ್ಬ ಮಾಣಿ ಇದ್ದ, ನಿನ್ನ ಹಂಗೇ ಇದ್ದ. ಎರಡು ಹಲ್ಲು ಮುರಿದಿತ್ತು. ಉದುರಿದ ಹಲ್ಲನ್ನು ಅಕ್ಕಿ ಕಾಳಿನ ಜೊತೆ ಸೇರಿಸಿ ಹಂಚಿನ ಮೇಲೆ ಒಗೆದಿದ್ದ’ ಕಥೆ ಅದಾಗಿಯೇ ಹರಿಯತೊಡಗಿತು ‘ಮಾವ ಚೊಲೋ ಕಥೆ ಹೇಳು’ ಗೋಪಿ ಸುಂಡಿ ಸೊಟ್ಟ ಮಾಡಿದ ‘ಆ ಮಾಣಿ ಶಾಲೆಗೆ ಹೋಗುವಾಗ ರಸ್ತೆಯಲೆಲ್ಲ ಬಿದ್ದ ನೀರಲ್ಲಿ ಎಂಜಲು ತುಪ್ಪಿ ನೀರಿನ ಮೇಲೆ ಎಂಜಲು ಹರಡುವುದನ್ನೇ ನೋಡುತ್ತ ಕೂತು ಬಿಡ್ತಿದ್ದ’ ‘ಶ್ಶೀ....ಹೊಲಸು...’ ಅಂದ ಗೋಪಿ ‘ಆ ಮಾಣಿಯ ದೋಸ್ತ ಶಾಲಿಗೆ ಹೋಗುವ ದಾರಿಯಲ್ಲಿ ಇದ್ದ ಕಡಜೇನು ಕೊಟ್ಟೆಗೆ ಕಲ್ಲು ಹೊಡೆದು ಓಡಿಹೋದ, ಮಾಣಿ ದೋಸ್ತನ ಹಿಂದೆ ಹೋಗ್ತಾ ಇದ್ದ ಎಂಜಲು ತುಪ್ಪುತ್ತ . ಕಡಜೇನು ಮಾಣಿಯನ್ನು ಓಡಿಸಿಕೊಂಡು ಬಂದು ಕಚ್ಚಿತು. ಕೂಗುತ್ತ ಓಡಿದ ಮನೆಗೆ. ಅವನಜ್ಜಿ ತಲೆಗೆ ಅರಿಶಿನ ಹಚ್ಚಿ ಕಡಜೇನಿನ ಸುಂಗು ತೆಗೆದಳು. ‘ಅವನ ಅಮ್ಮ ಎಲ್ಲಿತ್ತು....’ ಗೋಪಿ ಕಣ್ಣರಳಿಸಿದ ‘ಅವನಿಗೆ ಅಮ್ಮ ಇಲ್ಲ. ಅವನು ಹುಟ್ಟಿದಾಗಿಂದಲೂ ಅವಳನ್ನು ನೋಡಿರಲಿಲ್ಲ. ಅವಳಿಗೆ ಒಂತರದ ಹುಚ್ಚು, ಮರೆಯಲ್ಲಿ ಅಡಗಿ ನಿಂತು ಮಾಣಿಯ ಅಜ್ಜಿಯ ಕುತ್ತಿಗೆ ಹಿಸುಕುತ್ತಿದ್ದಳಂತೆ. ಹಾಗಾಗಿ ಮಗು ಹಡೆದ ನಂತರ ಅವಳನ್ನು ಮನೆಗೆ ಕರೆದುಕೊಂಡು ಬರಲೇ ಇಲ್ಲ. ‘ಅಮ್ಮಾ... ಮಾವ ಹೆದರಿಕೆ ಅಪ್ಪಂತ ಕಥೆ ಹೇಳ್ತಾ ಇದ್ದ’. ಗೋಪಿ ಒಳಗೆ ಓಡಿದ ‘ನಿಂಗೆಂತ ತಲೆ ಹಾಳಾತನಾ..... ಸುಮ್ಮನಿರು ಗೋಪಿಯನ್ನ ಎಂತಕ್ಕೆ ಹೆದರಿಸತೆ ನೀನು’ ಎಂದಳು ಗೋಪಿ ಕರೆತಂದಿದ್ದ ಲಲಿತಮ್ಮ ಹೊಸದೇನಲ್ಲ ಎಲ್ಲರೂ ಹೀಗೆ ನನ್ನನ್ನೇ ನೋಡುವದು. ಇಸ್ಪೀಟು ಆಟ ನಿಂತಿತು.

ಮಾಣಿಯ ಮೂಗಲ್ಲಿ ರಕ್ತ ಬರುತ್ತಿತ್ತು.ಅಜ್ಜಿ ಹಾಸಿಗೆ ಬಿಡಿಸಿ ಮಾಣಿಯನ್ನು ಮಲಗಿಸಿದಳು ‘ಅಪ್ಪಯ್ಯಂಗೆ, ಮಾಸ್ತರರಿಗೆ ಎಲ್ಲರಿಗೂ ಛಡಿ ಕೊಡ್ತೆ ಸುಮ್ಮನಿರು’ ಎಂದಳು. ಮಾಣಿ ಬಿಕ್ಕುತ್ತಲೆ ಇದ್ದ. ಸಂಜೆಯಾಗಿತ್ತು ದಿನವೂ ಹೀಗೆ ಹೊಡೆತ ನೆವ ಬೇರೆ. ಭಟ್ಟರು ಕೂತಲ್ಲಿಂದ ಎದ್ದು ಬಂದರು. ನಾನು ‘ರಾಕ್ಷಸನ್ ತಿಂಬೋ ಭೀಕ್ಷಸ’ ಎಂದು ಕಿರುಚಿದೆ. ಗೋಪಿ ಲಲಿತಮ್ಮ ದೂರ ಸರಿದರು.

ಮಾಣಿಗೆ ಎಚ್ಚರವಾದಾಗ ಹಾಸಿಗೆ ಒದ್ದೆಯಾಗಿತ್ತು, ಉಚ್ಚೆ ಪ್ಲಾಸ್ಟಿಕ್ಕನ್ನು ದಾಟಿ ಕೆಳಗೆ ಹರಿದಿತ್ತು. ಅಜ್ಜಿ ಬಂದು ಮಾಣಿಯ



ಹಣೆ ತಟ್ಟಿದಳು. ಕಥೆ ಹೇಳು ಎಂದ ಮಾಣಿ. ‘ಒಂದು ಮನೆಯಲ್ಲಿ ಒಬ್ಬ ಅಜ್ಜಿ ಅವಳಿಗೊಬ್ಬ ಮೊಮ್ಮಗ’ ಎಂದು ಅಜ್ಜಿ ಬಾಯಿ ಮುಚ್ಚಿರಲಿಲ್ಲ ‘ಇದು ನಮ್ಮದೇ ಕಥೆ’ ಮೊಮ್ಮಗ ರಾಗ ಎಳೆದ, ಅಜ್ಜಿ ಕಥೆ ಮುಂದುವರಿಸಿದಳು. ‘ಆ ಮನೆಗೆ ಒಬ್ಬ ರಾಕ್ಷಸ ಬಂದು ಊಟಕ್ಕೆ ಇದ್ದದ್ದನ್ನೆಲ್ಲ ತಿಂದು ಹೋಗುತ್ತಿದ್ದ. ಅಜ್ಜಿಗೆ ಮಾಣಿಗೆ ಉಪವಾಸ. ಒಂದು ದಿನ ಮಾಣಿ ಉಪವಾಸ ಮಾಡಿ ರಾಕ್ಷಸ ಬರುವ ಹೊತ್ತಿಗೆ ಮೆತ್ತು ಏರಿ ಕುಳಿತಿದ್ದ’ ರಾಕ್ಷಸ ಮನೆಗೆ ಬಂದು ‘ಮನೆಯಲ್ಲಿದ್ದವು ಯಾರಲೇ’ ಕೂಗಿದ ‘ನಾನು’ ಎಂದ ಮಾಣಿ ‘ನಾನು ಅಂದರೆ ಯಾರಲೇ’ ‘ರಾಕ್ಷಸನ್ ತಿಂಬೋ ಭೀಕ್ಷಸ’ ಹೌದ...ಹಂಗಾದರೆ ನಿನ್ನ ಹಲ್ಲು ತೋರಿಸು ಎಂದ ರಾಕ್ಷಸ ಹುಡುಗ ಒಂದು ಉದ್ದದ ಹಾರೆ ಕೋಲು ಮೆತ್ತಿಯ ಕಂಡಿಯಲ್ಲಿ ತೂರಿಸಿ ಒಗೆದ ರಾಕ್ಷಸ ಬೆಚ್ಚಿದ ‘ನಿನ್ನ ಜಡೆ ತೋರಿಸು’ ಎಂದ ಉದ್ದದ ಬಾವಿ ಹಗ್ಗ ಇಳಿಬಿಟ್ಟ ಹುಡುಗ. ಹೆದರಿದ ರಾಕ್ಷಸ ಇವ ಯಾರೋ ತನ್ನನ್ನು ತಿಂಬುವಂತವನೇ ಇರಬೇಕೆಂದು ಹೆದರಿ ಓಡುವಾಗ ಬಾಗಿಲು ಮೆಡ್ಡಿಲು ಎಡವಿ ಸತ್ತೇಹೋದ. ಮುದುಕಿ ಕತೆ ಮುಗಿಸಿ ಮಲಗಿದಳು. ಮಾಣಿಗೆ ನಿದ್ದೆ ಬರಲಿಲ್ಲ. ಮಸಿ ಕೆಂಡದಲ್ಲಿ ಮೀಸೆ ಬಳಿದುಕೊಂಡು ಕೈಯಲ್ಲಿ ಹಾರೆ ಹಿಡಿದುಕೊಂಡು ಮೆತ್ತಿಗೆ ಹೋದದ್ದು ಅವಳಿಗೆ ಗೊತ್ತಾಗಲಿಲ್ಲ. ಸಂಜೆ ಹೊತ್ತಿಗೆ ಮಗ ಮನೆಗೆ ಬಂದಾಗಲೂ ಮಲಗೇ ಇದ್ದಳು. ‘ಮಾಣಿ...’ ಅಪ್ಪ ಕೂಗಿದ ‘ಯಾರ ಅದು ಮೆತ್ತಿಗೆ...’ ‘ನಾನು ರಾಕ್ಷಸನ್ ತಿಂಬೋ ಭೀಕ್ಷಸ’ ‘ಅಲ್ಲೆಂತ ಮಾಡ್ತಾ ಇದ್ದೆ ಮೆತ್ತಿಗೆ’ ಮಾಣಿ ಮಾತಾಡದೇ ಇದ್ದ. ಅಪ್ಪ ಮೆತ್ತಿಗೆ ಹೋಗುವ ಏಣಿ ಏರಿ ಹೋಗುತ್ತ ಇರುವಾಗ ‘ನಾನು ರಾಕ್ಷಸನ್ ತಿಂಬೋ ಭೀಕ್ಷಸ’ ಎಂದು ಕೂಗುತ್ತ ಮಾಣಿ ಹಾರೆಕೋಲು ಬೀಸಿದ.ತಲೆ ತಪ್ಪಿಸಿಕೊಂಡ ಅಪ್ಪ ಕಾಲು ಜಾರಿ ಕೆಳಕ್ಕುರುಳಿದ. ತಲೆ ಒಡೆದಿತ್ತು. ಕಥೆ ಮುಗಿಸಿ ಸುಮ್ಮನೆ ಕುಳಿತೆ ಲಲಿತಮ್ಮನ ಕಣ್ಣಲ್ಲಿ ನೀರು ತುಂಬಿಕೊಂಡಿತು ‘ಅಪ್ಪಯ್ಯನ್ನ ನುಂಗಿದ್ದಲ್ಲದೆ ಈಗ ಸಮಜಾಯಿಸಿ ಕೊಡ್ತೀಯನ ಮುಂಡೇ ಮಗನೆ’ ಎಂದು ಬೆನ್ನಿಗೆ ಗುದ್ದಿದಳು. ಅವಳ ಬಳೆ ಒಡೆದು ಕೈಯಲ್ಲಿ ಗೀರು ಬಿದ್ದಿತು. ಗೋಪಿ ಒಳಗೆ ಓಡಿದ. ‘ಅಬ್ಬೆಯ ರೋಗ ಇವಂಗೂ ಅಂಟಿದಂಗೆ ಕಾಣ್ತು ಸುಡಗಾಡು’ ಎಂದು ನೋಟವೊಂದನ್ನು ಚೆಲ್ಲಿ ಮತ್ತೆ ಇಸ್ಪೀಟು ಆಡಲು ಹೊರಟರು. ಎದ್ದು ಹೊರಬಂದೆ. ಬೆನ್ನ ಹಿಂದಿನ ಬೆಳಕು ನಿಧಾನವಾಗಿ ದೂರವಾಯಿತು.

ಮೆಲ್ಲನೆ ಬೀಸಿದ ಗಾಳಿಗೆ ಬಿದಿರು ಮೆಳೆ ಸದ್ದು ಮಾಡಿತು. ಎಡಗಡೆ ಚೌಡಿ ಬಾವಿ ಇತ್ತು. ದೂರದಲ್ಲಿ ನಮ್ಮನೆಯ ಬೆಳಕು ಕಾಣಿಸಿತು. ಮುದುಕಿ ಪಾತ್ರೆ ತೊಳೆವ ಸದ್ದಾಯಿತು. ರಾಣಿ ಕೂಗಿತು. ತುಸು ಧೈರ್ಯ ಬಂದು ನಡಿಗೆಯ ಬಿರುಸನ್ನು ತಗ್ಗಿಸಿದೆ